## GOVERNMENT OF KARNATAKA

No. RD 158 TNR 2020 (P1)

Karnataka Government Secretariat,
Vidhana Soudha,
Bengaluru, Dated: 03-06-2020

## ORDER

**Subject: Regulation of movement of persons from other states to Karnataka.**

*****

For controlling spread of Covid-19 pandemic, following directions are issued under Section 24(l) of the Disaster Management Act, 2005 and Section 2(1) of the Epidemic Diseases Act, 1897 to regulate movement of persons from other states to Karnataka.

1. The protocol issued by Health & Family Welfare Department for inter-state travel of persons to Karnataka during the Phased Reopening (Unlock 1) period, as annexed to this order, shall be followed by all incoming persons, establishments, transport agencies and government departments.

2. Any violation of the protocol, as detailed in the Annexure to this Order, shall attract penal action as per Section 51(b) of the Disaster Management Act, 2005 and Section 188 of the Indian Penal Code.

3. **Role of general public, resident welfare associations and commercial establishments:**

   a. All shops, commercial establishments, offices, factories, malls, religious places, hotels, etc. are required to check for quarantine stamp on all their customers or visitors(at the back of their hand) before they enter the premises. They should not allow those with quarantine stamp to enter before the end of their quarantine period or till they get current Covid negative test report. They should inform the police at telephone number 100 about violations.

   b. General public and resident welfare associations are advised to report any violation of the quarantine in their neighbourhood to the police at telephone number 100.

**(T.M.Vijay Bhaskar)**
Chief Secretary
and Chairman, State Executive Committee,
Karnataka State Disaster Management Authority.

To:
The Compiler, Karnataka Gazette, Bengaluru

# Annexure to Order No. RD 158 TNR 2020 (P1), Dated: 03-06-2020

## Protocol for Inter-state traveller to Karnataka during Phased Reopening (Unlock 1)

**Date: 3rd June 2020**

Following are the salient features of protocol for Inter State traveller coming into Karnataka in the Lockdown 5 applicable from 3rd June 2020.

**1) Mandatory Self- Registration on Seva Sindhu Portal by all traveller before entering Karnataka**

a. Name, Address and Mobile Number to be provided

b. No approval required

c. Use of same Mobile number for multiple registrations not allowed except in the case of a family.

d. Business visitors to give details (name, mobile and address of persons in Karnataka they intend to meet) and date of return

e. Transit traveller to provide address in destination state and indicate exit check post from Karnataka

**2. Health Screening of all incoming persons at entry points**

a. Border Check-posts, Airports, Railway stations and Bus stands

b. Home Quarantine hand-stamping on hand for 14-day period as per quarantine norms

**3. Quarantine Norms**

**I. Symptomatic on Arrival from any State:**

i. 7 days of Hospital isolation at Covid Care Centre(CCC) /Dedicated CovidHealth Centre (DCHC) followed by 7 days of home quarantine (or manage as per symptoms)

**ii. Test immediately on arrival**

a) If positive, shift to Dedicated Covid Hospital (DCH)

b) If negative, no further test required

**II. Asymptomatic on Arrival**

**A. Coming from Maharashtra**

a) 7 days of Institutional Quarantine followed by 14 days of home quarantine

b) Test if they develop symptoms during Quarantine period

c) Exceptions for Special Category Asymptomatic persons

1. 21 day home quarantine (one attendant to be permitted)to accompany depending on the case

2. Special category passengers:
   i. Death in the family
   ii. Pregnant Women
   iii. Children aged below 10 years
   iv. Elderly aged above 60 years
   v. Serious illness
   vi. Human Distress

d) **Business visitors from Maharashtra:**

To establish that one is a business visitor, person should show **confirmed** return flight/train ticket which should not be more than 7 days later from the date of arrival. In case one is coming by road, he/she should provide the address proof of person in Karnataka he intends to meet. In addition, the person should produce:

i. *One havingCovid negative test certificate* which is not more than 2 days old-Exempted from quarantine

ii. *One does not have a Covid negative test certificate*- such person should go for institutional quarantine of 2 days within which Covid test should be conducted at his/her own cost. After the test result is negative, person is exempted from quarantine.

No hand-stamping of business visitor is required.

*e)* **Transit traveller from Maharashtra:**

To establish that one is a transit traveler, person should show flight/train ticket for onward journey which should not be more than 1 day later from the date of arrival. In case one is traveling by road, he/she should provide the address and identity proof in destination state. The traveler should get his exit recorded at the selected exit check-post / railway station / airport.

Such traveler should be hand stamped, if traveling by road.

**B. Coming from other States**

a) 14 days of home quarantine

b) Test if they develop symptoms during home quarantine period

c) For persons where home Quarantine is not possible, then Institutional Quarantine should be done especially when there is:

   1. Large family or no separate room for home Quarantine
   2. Slum or overcrowded areas where home quarantine can notbe followed

d) **Business visitors from Other States**

To establish that one is a business traveler, person should show **confirmed** return flight/train ticket which should not be more than 7 days later from the date of arrival. In case one is coming by road, he/she should provide the address proof of person in Karnataka he intends to meet.

i. No Quarantine,and

ii. No hand stamping for business visitors from other states.

e) **Transit traveller from Other States**

To establish that one is a transit traveler, person should show flight/train ticket for onward journey which should not be more than 1 day later from the date of arrival. In case one is traveling by road, he/she should provide the address and identity proof in destination state.

Such traveler should be hand stamped, if traveling by road.

4. **Home Quarantine: Strict Enforcement:**

Home Quarantine Follow-up for all incoming persons, except business visitors and transit traveller

**A. Rural Areas**

- Home Quarantine Poster on home door
- Information to two neighbours
- Gram Panchayat Task to carry an overall responsibility of Home Quarantine
- 3 Member team in every village to monitor
- Flying Squad: FIR against violation of Home Quarantine and shift to Institutional Quarantine
- IVRS Call-centre outbound calls
- Quarantine watch App- daily self-monitoring upload- Temperature, finger-tip pulse-oximetry for elderly and persons with co-morbidity

**B. BBMP and other Urban Areas**

- Home Quarantine Poster on home door
- Information to two Neighbours
- Ward level team to carry an overall responsibility of Home Quarantine
- 3 Member team at Booth level to monitor along with involvement of Resident Welfare /Apartment Owners' Associations
- Flying Squad: FIR against violation of home Quarantine and shift to Institutional Quarantine
- IVRS Call-centre outbound calls
- Quarantine watch App- daily self-monitoring upload- Temperature, finger-tip pulse-oximetry for elderly and persons with co-morbidity

5. **Symptomatic & ILIs to call Apthamitra helpline (14410):** All those who are in home quarantine or otherwise and develop symptoms similar to Covid-19 or Influenza Like Illness (ILI) should call 24 *7 free helpline APTHAMITRA to get telemedicine help and be directed to Fever Clinics for further assessment and Covid- 19 test.

6. **Role of general public, resident welfare association and commercial establishments:**

   a. All shops, commercial establishments, offices, factories, malls, religious places, hotels, etc. are required to check for quarantine stamp on all their customers or visitors (at the back of their hand) before they enter the premises. They should not allow those with quarantine stamp to enter. They should inform the police at telephone number 100.

   b. General public and resident welfare associations are advised to report any violation of the quarantine in their neighbouhood to the police at telephone number 100.

**(T.M.Vijay Bhaskar)**
Chief Secretary
and Chairman, State Executive Committee,
Karnataka State Disaster Management Authority.

**ಕರ್ನಾಟಕ ಸರ್ಕಾರ**

ಸಂ: ಕಂಇ 158 ಟಿಎನ್‌ಆರ್ 2020 (ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 03-06-2020

## ಆದೇಶ

**ವಿಷಯ: ಇತರ ರಾಜ್ಯಗಳಿಂದ ಕರ್ನಾಟಕಕ್ಕೆ ಪ್ರವೇಶಿಸುವ ವ್ಯಕ್ತಿಗಳ ಸಂಚಾರ ನಿಯಂತ್ರಣದ ಬಗ್ಗೆ.**

*****

ಕೋವಿಡ್ -19 ಸಾಂಕ್ರಾಮಿಕ ಸೋಂಕು ಹರಡುವುದನ್ನು ನಿಯಂತ್ರಿಸಲು, ವಿಪತ್ತು ನಿರ್ವಹಣಾ ಕಾಯ್ದೆ, 2005ರ ಸೆಕ್ಷನ್ 24(ಎಲ್) ಮತ್ತು ಸಾಂಕ್ರಾಮಿಕ ರೋಗಗಳ ಕಾಯ್ದೆ, 1897ರ ಸೆಕ್ಷನ್ 2(1) ರಡಿಯಲ್ಲಿ ಇತರ ರಾಜ್ಯಗಳಿಂದ ಕರ್ನಾಟಕಕ್ಕೆ ವ್ಯಕ್ತಿಗಳ ಚಲನೆಯನ್ನು ನಿಯಂತ್ರಿಸಲು ಈ ಕೆಳಗಿನ ನಿರ್ದೇಶನಗಳನ್ನು ನೀಡಲಾಗಿದೆ.

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಲಾಕ್‌ಡೌನ್ ಸಡಲಿಕೆಯ (ತೆರವು-1) ಅವಧಿಯಲ್ಲಿ ಕರ್ನಾಟಕಕ್ಕೆ ಬರುವ ಅಂತರ ರಾಜ್ಯ ವ್ಯಕ್ತಿಗಳ ಬಗ್ಗೆ ಹೊರಡಿಸಿದ ಶಿಷ್ಟಾಚಾರ (ಪ್ರೋಟೋಕಾಲ್) ಅನ್ನು ಈ ಆದೇಶದೊಂದಿಗೆ ಅನುಬಂಧಿಸಿದ್ದು, ಎಲ್ಲಾ ಒಳಬರುವ ವ್ಯಕ್ತಿಗಳು, ಎಲ್ಲಾ ಸಂಸ್ಥೆಗಳು, ಸಾರಿಗೆ ಏಜೆನ್ಸಿಗಳು ಮತ್ತು ಸರ್ಕಾರಿ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದು.

2. ಈ ಆದೇಶದ ಅನುಬಂಧದಲ್ಲಿ ವಿವರಿಸಿರುವಂತೆ ಯಾವುದೇ ಶಿಷ್ಟಾಚಾರವನ್ನು ಉಲ್ಲಂಘಿಸಿದಲ್ಲಿ, ವಿಪತ್ತು ನಿರ್ವಹಣಾ ಕಾಯ್ದೆ 2005ರ ಸೆಕ್ಷನ್ 51(ಬಿ) ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 188ರ ಪ್ರಕಾರ ದಂಡನೆಗೆ ಒಳಪಡತಕ್ಕದ್ದಾಗಿರುತ್ತದೆ.

3. **ಸಾರ್ವಜನಿಕರ, ನಿವಾಸಿ ಕಲ್ಯಾಣ ಸಂಘಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪಾತ್ರ:**

   a) ಎಲ್ಲಾ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಚೇರಿಗಳು, ಕಾರ್ಖಾನೆಗಳು, ಮಾಲ್‌ಗಳು, ಧಾರ್ಮಿಕ ಸ್ಥಳಗಳು, ಹೋಟೆಲ್‌ಗಳು ಇತ್ಯಾದಿಗಳು ತಮ್ಮ ಎಲ್ಲಾ ಗ್ರಾಹಕರು ಅಥವಾ ಸಂದರ್ಶಕರು ಆವರಣಕ್ಕೆ ಪ್ರವೇಶಿಸುವ ಮೊದಲು ಕ್ವಾರಂಟೈನ್ ಮುದ್ರೆಯನ್ನು (ಅವರ ಕೈಯ ಹಿಂಭಾಗದಲ್ಲಿ) ಪರಿಶೀಲಿಸಬೇಕಾಗುತ್ತದೆ. ಈ ಸಂಸ್ಥೆಯವರು ಕ್ವಾರಂಟೈನ್ ಮುದ್ರೆಯನ್ನು ಹೊಂದಿರುವವರನ್ನು ಅವರ ಕ್ವಾರಂಟೈನ್ ಅವಧಿ ಮುಕ್ತಾಯವಾಗುವವರೆಗೂ ಅಥವಾ ಅವರ ಕೋವಿಡ್ ತಪಾಸಣೆಯಲ್ಲಿ ನೆಗೆಟಿವ್ ವರದಿ ಸ್ವೀಕೃತವಾಗುವವರೆಗೂ ಪ್ರವೇಶಿಸಲು ಅವಕಾಶ ನೀಡಬಾರದು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಪೊಲೀಸರಿಗೆ ದೂರವಾಣಿ ಸಂಖ್ಯೆ 100 ರಲ್ಲಿ ಉಲ್ಲಂಘನೆಗಳ ಬಗ್ಗೆ ಮಾಹಿತಿ ನೀಡುವುದು.

   b) ಸಾರ್ವಜನಿಕರು ಮತ್ತು ನಿವಾಸಿ ಕಲ್ಯಾಣ ಸಂಘಗಳು ತಮ್ಮ ನೆರೆಹೊರೆಯಲ್ಲಿರುವ ಯಾವುದೇ ವ್ಯಕ್ತಿಗಳು ಕ್ವಾರಂಟೈನನ್ನು ಉಲ್ಲಂಘಿಸಿದಲ್ಲಿ ಪೊಲೀಸರಿಗೆ ದೂರವಾಣಿ ಸಂಖ್ಯೆ 100 ರಲ್ಲಿ ಮಾಹಿತಿ ನೀಡುವುದು.

ತಮವಿಜಯಭಾಸ್ಕರ

**(ತ.ಮ.ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

ಇವರಿಗೆ,
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020 (ಭಾ-1) ದಿನಾಂಕ: 03-06-2020ರ **ಅನುಬಂಧ**

## ಲಾಕ್‌ಡೌನ್ ಸಡಿಲಿಕೆಯ (ತೆರವು-1) ಅವಧಿಯಲ್ಲಿ ಕರ್ನಾಟಕಕ್ಕೆ ಪ್ರಯಾಣಿಸುವ ಅಂತರರಾಜ್ಯ ಪ್ರಯಾಣಿಕರಿಗೆ ಶಿಷ್ಟಾಚಾರಗಳು

**3ನೇ ಜೂನ್ 2020 ರಿಂದ ಅನ್ವಯವಾಗುವ ತೆರವು-1ರ ಅವಧಿಯಲ್ಲಿ ಕರ್ನಾಟಕಕ್ಕೆ ಬರುವ ಮುನ್ನ ಅಂತರರಾಜ್ಯ ಪ್ರಯಾಣಿಕರು ಪಾಲಿಸಬೇಕಾದ ಶಿಷ್ಟಾಚಾರದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:**

1. **ಕರ್ನಾಟಕಕ್ಕೆ ಪ್ರವೇಶಿಸುವ ಮುನ್ನ ಎಲ್ಲಾ ಪ್ರಯಾಣಿಕರು ಸೇವಾ ಸಿಂಧು ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಸ್ವಯಂ ನೋಂದಣಿ ಮಾಡಿಕೊಳ್ಳುವುದು.**
   a. ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ತಪ್ಪದೇ ನೀಡುವುದು.
   b. ಅಂಗೀಕಾರದ ಅಗತ್ಯವಿರುವುದಿಲ್ಲ.
   c. ಕುಟುಂಬದ ಸದಸ್ಯರನ್ನು ಹೊರತುಪಡಿಸಿ, ಒಂದೇ ಮೊಬೈಲ್ ಸಂಖ್ಯೆಯನ್ನು ಒಂದಕ್ಕಿಂತ ಹೆಚ್ಚು ನೋಂದಣಿಗೆ ಬಳಸಲು ಅವಕಾಶವಿರುವುದಿಲ್ಲ.
   d. ವಾಣಿಜ್ಯ ವಹಿವಾಟುಗಳ ಉದ್ದೇಶಕ್ಕಾಗಿ ಪ್ರಯಾಣ ಮಾಡುವವರು ವಿವರಗಳನ್ನು (ಕರ್ನಾಟಕದಲ್ಲಿ ಭೇಟಿ ಮಾಡುವ ವ್ಯಕ್ತಿಯ ಹೆಸರು, ಮೊಬೈಲ್ ದೂರವಾಣಿ ಸಂಖ್ಯೆ ಮತ್ತು ವಿಳಾಸ ತಪ್ಪದೇ ನೀಡುವುದು) ಹಾಗೂ ಹಿಂದಿರುಗುವ ದಿನಾಂಕವನ್ನು ನೀಡುವುದು.
   e. ರಾಜ್ಯದ ಮುಖೇನ ಬೇರೆ ರಾಜ್ಯಗಳಿಗೆ ಪ್ರಯಾಣ ಮಾಡುವ ಪ್ರಯಾಣಿಕರು, ಪ್ರಯಾಣ ಮಾಡುವ ರಾಜ್ಯದ ವಿಳಾಸ ನೀಡಬೇಕು ಮತ್ತು ಕರ್ನಾಟಕದಿಂದ ನಿರ್ಗಮಿಸುವ ಚೆಕ್ ಪೋಸ್ಟ್.ನ ವಿವರಗಳನ್ನು ತಪ್ಪದೇ ನಮೂದಿಸಬೇಕು.

2. **ರಾಜ್ಯವನ್ನು ಪ್ರವೇಶಿಸುವ ಎಲ್ಲಾ ವ್ಯಕ್ತಿಗಳ ಆರೋಗ್ಯ ತಪಾಸಣೆಯನ್ನು ಆಗಮನದ ಕೇಂದ್ರಗಳಲ್ಲಿ ಮಾಡುವುದು.**
   a. ಗಡಿಭಾಗದ ಚೆಕ್ ಪೋಸ್ಟ್ ಗಳು, ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ಬಸ್ ನಿಲ್ದಾಣಗಳು.
   b. ಕ್ವಾರಂಟೈನ್ ಮಾನದಂಡಗಳಿಗನುಸಾರವಾಗಿ 14 ದಿನಗಳ ಹೋಂ ಕ್ವಾರಂಟೈನ್ ಕುರಿತು ಕೈಗೆ ಹೋಂ ಕ್ವಾರಂಟೈನ್ ಮುದ್ರೆಯನ್ನು ಮುಂಗೈಗೆ ಹಾಕುವುದು.

3. **ಕ್ವಾರಂಟೈನ್ ನಿಯಾಮವಳಿಗಳು:**
   I. **ಯಾವುದೇ ರಾಜ್ಯದ ಪ್ರಯಾಣಿಕರಿಗೆ ಆಗಮನದ ಸಂದರ್ಭದಲ್ಲಿ ರೋಗ ಲಕ್ಷಣಗಳಿದ್ದರೆ -**
      i. ಕೋವಿಡ್ ನಿಗಾ ಕೇಂದ್ರ (ಸಿಸಿಸಿ) / ನಿಗಧಿತ ಕೋವಿಡ್ ಆರೋಗ್ಯ ಕೇಂದ್ರ (ಡಿಸಿಹೆಚ್ ಸಿ)ದಲ್ಲಿ 07 ದಿನಗಳ ಕಾಲ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸುವುದು, ತದನಂತರ 07 ದಿನಗಳ ಕಾಲ ಹೋಂ ಕ್ವಾರಂಟೈನ್ (ಅಥವಾ ರೋಗ ಲಕ್ಷಣಗಳಿಗನುಸಾರವಾಗಿ ನಿರ್ವಹಣೆ).

**ii. ಆಗಮಿಸಿದ ಕೂಡಲೇ ತಪಾಸಣೆ**

a. ಪಾಸಿಟಿವ್ ಬಂದರೆ ನಿಗಧಿತ ಕೋವಿಡ್ ಆಸ್ಪತ್ರೆ (ಡಿಸಿಹೆಚ್)ಗೆ ದಾಖಲಿಸುವುದು.

b. ನೆಗೆಟಿವ್ ಬಂದರೆ, ಮುಂದಿನ ತಪಾಸಣೆಯ ಅಗತ್ಯವಿರುವುದಿಲ್ಲ.

**II. ಆಗಮನದ ಸಂಧರ್ಭದಲ್ಲಿ ರೋಗ ಲಕ್ಷಣಗಳಿಲ್ಲದಿದ್ದರೆ.**

**A. <u>ಮಹಾರಾಷ್ಟ್ರದಿಂದ ಆಗಮಿಸುವವರಿಗೆ</u>**

a) 07 ದಿನಗಳ ಸಾಂಸ್ಥಿಕ ಕ್ವಾರಂಟೈನ್ ತದನಂತರ 07 ದಿನಗಳ ಹೋಂ ಕ್ವಾರಂಟೈನ್.

b) ಕ್ವಾರಂಟೈನ್ ಅವಧಿಯಲ್ಲಿ ರೋಗ ಲಕ್ಷಣಗಳು ಕಂಡುಬಂದರೆ ತಪಾಸಣೆ ಮಾಡುವುದು.

c) ರೋಗ ಲಕ್ಷಣಗಳಿಲ್ಲದ ವಿಶೇಷ ಪ್ರವರ್ಗದ ವ್ಯಕ್ತಿಗಳಿಗೆ ವಿನಾಯಿತಿಗಳು.

1. 21 ದಿನಗಳ ಹೋಂ ಕ್ವಾರಂಟೈನ್ (ಒಬ್ಬ ಸಹಾಯಕರಿಗೆ ಅನುಮತಿಯಿದೆ) ಪ್ರಕರಣದ ಆಧಾರದ ಮೇಲೆ ಜೊತೆಯಲ್ಲಿರಲು
2. ವಿಶೇಷ ಪ್ರವರ್ಗದ ಪ್ರಯಾಣಿಕರು

i. ಕುಟುಂಬದ ಸದಸ್ಯರು ಮೃತರಾಗಿದ್ದರೆ.

ii. ಗರ್ಭಿಣಿ ಮಹಿಳೆಯರು

iii. ಹತ್ತು ವರ್ಷಕ್ಕಿಂತ ಕೆಳಗಿರುವ ಮಕ್ಕಳು

iv. ಅರವತ್ತು ವರ್ಷದ ಮೇಲ್ಪಟ್ಟ ಹಿರಿಯ ನಾಗರೀಕರು

v. ತೀವ್ರತರ ಅನಾರೋಗ್ಯದಿಂದ ಬಳಲುತ್ತಿರುವವರು.

vi. ಮಾನವ ಯಾತನೆಗೊಳಗಾದವರು

d) **<u>ಮಹಾರಾಷ್ಟ್ರದಿಂದ ಬರುವ ವ್ಯವಹಾರಸ್ಥ ಪ್ರಯಾಣಿಕರು:</u>** ತಾವು ವ್ಯವಹಾರಸ್ಥರು ಎಂದು ನಿರೂಪಿಸಲು, ವ್ಯಕ್ತಿಯು ವಾಪಾಸಾಗುವ **ಖಾತ್ರಿಪಟ್ಟಿರುವ ವಿಮಾನ/ ರೈಲು ಟಿಕೆಟ್** ಅನ್ನು ತೋರಿಸಬೇಕು, ಅದು ಆಗಮನದ ದಿನಾಂಕದಿಂದ 7 ದಿನಗಳ ಒಳಗಿರಬೇಕು. ಒಂದು ವೇಳೆ ರಸ್ತೆಯ ಮೂಲಕ ಬರುತ್ತಿದ್ದರೆ, ಅವನು/ಅವಳು ಕರ್ನಾಟಕದಲ್ಲಿ ತಾವು ಭೇಟಿಯಾಗುವ ವ್ಯಕ್ತಿಯ ಗುರುತಿನ ಚೀಟಿಯನ್ನು ಒದಗಿಸಬೇಕು, ಅದರೊಂದಿಗೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಬೇಕು.

i. **2 ದಿನಗಳಿಗಿಂತ ಹಳೆಯದಲ್ಲದ ಕೋವಿಡ್ ನೆಗೆಟಿವ್ ಪರೀಕ್ಷಾ ಪ್ರಮಾಣಪತ್ರವನ್ನು ಯಾರು ಹೊಂದಿರುತ್ತಾರೋ** ಅವರಿಗೆ ಕ್ವಾರಂಟೈನ್‌ನಿಂದ ವಿನಾಯಿತಿ ಇರುತ್ತದೆ.

ii. **ಯಾರು ಕೋವಿಡ್ ನೆಗೆಟಿವ್ ಪರೀಕ್ಷಾ ಪ್ರಮಾಣಪತ್ರವನ್ನು ಹೊಂದಿಲ್ಲವೋ** ಅಂತಹ ವ್ಯಕ್ತಿಯು 2 ದಿನಗಳ ಸಾಂಸ್ಥಿಕ ಕ್ವಾರಂಟೈನ್‌ಗೆ ಹೋಗಬೇಕು ಅದರಲ್ಲಿಯೂ ಕೋವಿಡ್ ಪರೀಕ್ಷೆಯನ್ನು ಅವನ / ಅವಳ ಸ್ವಂತ ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಪರೀಕ್ಷಾ ಫಲಿತಾಂಶವು ನೆಗೆಟಿವ್

ಎಂದು ಕಂಡು ಬಂದ ನಂತರ, ವ್ಯಕ್ತಿಯನ್ನು ಕ್ವಾರಂಟೈನ್‌ನಿಂದ ಮುಕ್ತಗೊಳಿಸಲಾಗುತ್ತದೆ.

ವ್ಯವಹಾರಸ್ಥ ಪ್ರಯಾಣಿಕರಿಗೆ ಅಂಗೈ ಮೇಲೆ ಮುದ್ರೆ ಒತ್ತುವ ಅವಶ್ಯಕತೆಯಿರುವುದಿಲ್ಲ.

e) **ಮಹಾರಾಷ್ಟ್ರದಿಂದ ರಾಜ್ಯದ ಮೂಲಕ ಹಾದುಹೋಗುವ ಪ್ರಯಾಣಿಕರು:** ರಾಜ್ಯದ ಮೂಲಕ ಹಾದುಹೋಗುವ ಪ್ರಯಾಣಿಕರೆಂದು ನಿರೂಪಿಸಲು, ವ್ಯಕ್ತಿಯು ಆಗಮನದ ದಿನಾಂಕದಿಂದ ಮುಂದಿನ 1 ದಿನಕ್ಕಿಂತ ಕಡಿಮೆ ಇರುವ **ಖಾತ್ರಿಪಟ್ಟಿರುವ ವಿಮಾನ/ ರೈಲು ಟಿಕೆಟ್** ಅನ್ನು ತೋರಿಸಬೇಕು, ಒಂದು ವೇಳೆ ವ್ಯಕ್ತಿಯು ರಸ್ತೆಯ ಮೂಲಕ ಪ್ರಯಾಣಿಸುತ್ತಿದ್ದರೆ ಅವನು/ಅವಳು ಗುರುತಿನ ದಾಖಲೆ ಮತ್ತು ಪ್ರಯಾಣಿಸುತ್ತಿರುವ ರಾಜ್ಯದ ವಿಳಾಸ ದಾಖಲೆ ಒದಗಿಸಬೇಕು. ಪ್ರಯಾಣಿಕನು ತನ್ನ ನಿರ್ಗಮನವನ್ನು ಆಯ್ದ ನಿರ್ಗಮನದ ಚೆಕ್-ಪೋಸ್ಟ್ / ರೈಲ್ವೆ ನಿಲ್ದಾಣ / ವಿಮಾನ ನಿಲ್ದಾಣದಲ್ಲಿ ದಾಖಲಿಸುವುದು. ರಸ್ತೆಯ ಮೂಲಕ ಪ್ರಯಾಣಿಸುವ ಅಂತಹ ಪ್ರಯಾಣಿಕರ ಅಂಗೈ ಮೇಲೆ ಮುದ್ರೆಯನ್ನು ಒತ್ತುವುದು.

**B. ಇತರೆ ರಾಜ್ಯಗಳಿಂದ ಆಗಮಿಸುವವರಿಗೆ**

a) 14 ದಿನಗಳ ಹೋಂ ಕ್ವಾರಂಟೈನ್

b) ಹೋಂ ಕ್ವಾರಂಟೈನ್ ಅವಧಿಯಲ್ಲಿ ರೋಗ ಲಕ್ಷಣಗಳು ಕಂಡುಬಂದರೆ ಪರೀಕ್ಷೆಗೊಳಪಡಿಸಬೇಕು.

c) ಹೋಂ ಕ್ವಾರಂಟೈನ್ ಸಾಧ್ಯವಾಗದ ವ್ಯಕ್ತಿಗಳಿಗೆ , ಸಾಂಸ್ಥಿಕ ಕ್ವಾರಂಟೈನ್ ಗೆ ಒಳಗಾಗಬೇಕು ಪ್ರಮುಖವಾಗಿ ಈ ಕೆಳಗಿನ ಸಂದರ್ಭಗಳಲ್ಲಿ -

1. ದೊಡ್ಡ ಕುಟುಂಬ ಅಥವಾ ಹೋಂ ಕ್ವಾರಂಟೈನ್ ಗೆ ಪ್ರತ್ಯೇಕ ಕೊಠಡಿಯಿಲ್ಲದ ಸಂದರ್ಭದಲ್ಲಿ
2. ಕೊಳಗೇರಿ ಪ್ರದೇಶಗಳು ಅಥವಾ ಹೆಚ್ಚು ಜನಸಂದಣಿಯಿರುವ ಪ್ರದೇಶಗಳಲ್ಲಿ ಹೋಂ ಕ್ವಾರಂಟೈನ್ ಅನ್ನು ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ

d) **ಇತರೆ ರಾಜ್ಯಗಳಿಂದ ಬರುವ ವ್ಯವಹಾರಸ್ಥ ಪ್ರಯಾಣಿಕರು:** ತಾವು ವ್ಯವಹಾರಸ್ಥರು ಎಂದು ನಿರೂಪಿಸಲು, ವ್ಯಕ್ತಿಯು ಹಿಂದಿರುಗುವ ಖಾತ್ರಿಪಟ್ಟಿರುವ ವಿಮಾನ/ ರೈಲು ಟಿಕೆಟ್ ಅನ್ನು ತೋರಿಸಬೇಕು, ಅದು ಆಗಮನದ ದಿನಾಂಕದಿಂದ 7 ದಿನಗಳಿಗಿಂತ ಹೆಚ್ಚು ಇರಬಾರದು. ಒಂದು ವೇಳೆ ರಸ್ತೆಯ ಮೂಲಕ ಬರುತ್ತಿದ್ದರೆ, ಅವನು / ಅವಳು ರಾಜ್ಯದಲ್ಲಿ ಭೇಟಿಯಾಗ ಬಯಸುವ ವ್ಯಕ್ತಿಯ ವಿಳಾಸದ ದಾಖಲೆಯನ್ನು ಒದಗಿಸುವುದು.

i. ಕ್ವಾರಂಟೈನ್ ಇರುವುದಿಲ್ಲ, ಮತ್ತು

ii. ಇತರೆ ರಾಜ್ಯಗಳಿಂದ ಬರುವ ವ್ಯವಹಾರಸ್ಥರಿಗೆ ಅಂಗೈಗೆ ಮುದ್ರೆಯ ಅಗತ್ಯವಿರುವುದಿಲ್ಲ.

e) **ಇತರೆ ರಾಜ್ಯಗಳಿಂದ ಹಾದುಹೋಗುವ ಪ್ರಯಾಣಿಕರು:** ರಾಜ್ಯದ ಮುಖೇನ ಹಾದುಹೋಗುವ ಪ್ರಯಾಣಿಕರೆಂದು ನಿರೂಪಿಸಲು, ವ್ಯಕ್ತಿಯು ಕಡ್ಡಾಯವಾಗಿ ಆಗಮಿಸಿದ ಅವಧಿಯಿಂದ 1 ದಿನಕ್ಕಿಂತ ಹೆಚ್ಚಿನ

ಅವಧಿಯಲ್ಲದ ಮುಂದಿನ ಪ್ರಯಾಣದ ವಿಮಾನ/ರೈಲು ಟಿಕೆಟ್‌ಗಳನ್ನು ಹಾಜರುಪಡಿಸತಕ್ಕದ್ದು. ಒಂದು ವೇಳೆ ವ್ಯಕ್ತಿಯು ರಸ್ತೆಯ ಮೂಲಕ ಪ್ರಯಾಣಿಸುತ್ತಿದ್ದರೆ ಅವನು/ಅವಳು ಪ್ರಯಾಣಿಸುತ್ತಿರುವ ರಾಜ್ಯದ ವಿಳಾಸ ಮತ್ತು ಗುರುತಿನ ದಾಖಲೆಗಳನ್ನು ಒದಗಿಸುವುದು.

ರಸ್ತೆಯ ಮೂಲಕ ಪ್ರಯಾಣಿಸುವ ಅಂತಹ ಪ್ರಯಾಣಿಕರ ಅಂಗೈ ಮೇಲೆ ಮುದ್ರೆಯನ್ನು ಒತ್ತಬೇಕು.

## 4. ಹೋಂ ಕ್ವಾರಂಟೈನ್: ಕಟ್ಟುನಿಟ್ಟಿನ ಕ್ರಮಗಳ ಜಾರಿ

ವ್ಯಾಪಾರದ ಸಲುವಾಗಿ ಆಗಮಿಸುವ ಮತ್ತು ರಾಜ್ಯದ ಮೂಲಕ ಹಾದುಹೋಗುವ ಪ್ರಯಾಣಿಕರನ್ನು ಹೊರತುಪಡಿಸಿ, ರಾಜ್ಯದ ಒಳಬರುವ ಎಲ್ಲ ವ್ಯಕ್ತಿಗಳು ಹೋಂ ಕ್ವಾರಂಟೈನ್ ಅನ್ನು ಅನುಸರಿಸುವುದು.

### A. ಗ್ರಾಮೀಣ ಪ್ರದೇಶಗಳಲ್ಲಿ

- ಮನೆಯ ಬಾಗಿಲಿಗೆ ಹೋಂ ಕ್ಯಾರೆಂಟೈನ್ ಭಿತ್ತಿಪತ್ರ ಅಂಟಿಸುವುದು
- ಇಬ್ಬರು ನೆರೆಹೊರೆಯವರಿಗೆ ಮಾಹಿತಿ ನೀಡುವುದು.
- ಹೋಂ ಕ್ವಾರಂಟೈನ್ ಕಾರ್ಯತಂತ್ರದ ನಿರ್ವಹಣೆಯ ಒಟ್ಟಾರೆ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಯು ನಿರ್ವಹಿಸುವುದು
- ಮೇಲ್ವಿಚಾರಣೆ ಮಾಡಲು ಪ್ರತಿಯೊಂದು ಹಳ್ಳಿಯಲ್ಲಿ 3 ಸದಸ್ಯರ ತಂಡವನ್ನು ರಚಿಸುವುದು.
- ಫ್ಲೈಯಿಂಗ್ ಸ್ಕ್ವಾಡ್: ಹೋಂ ಕ್ವಾರಂಟೈನ್ ಉಲ್ಲಂಘಿಸುವವರ ವಿರುದ್ಧ ಎಫ್‌ಐಆರ್ ದಾಖಲು ಮಾಡುವುದು ಮತ್ತು ಅಂತಹವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ವರ್ಗಾಯಿಸುವುದು.
- IVRS ಕಾಲ್-ಸೆಂಟರ್ ಮುಖಾಂತರ ಕರೆ ಮಾಡಿ ನಿಗಾವಹಿಸುವುದು.
- ಕ್ಯಾರೆಂಟೈನ್ ವಾಚ್ ಅಪ್ಲಿಕೇಶನ್ ಮೂಲಕ ವ್ಯಕ್ತಿಗಳ ತಾಪಮಾನ, ವಯಸ್ಸಾದವರಿಗೆ ಮತ್ತು ಸಹ-ಅಸ್ವಸ್ಥತೆವುಳ್ಳವರಿಗೆ ಬೆರಳು-ತುದಿಯ ನಾಡಿ-ಆಕ್ಸಿಮೆಟ್ರಿ ಮೂಲಕ ಸ್ವಯಂ ಮೇಲ್ವಿಚಾರಣಾ ಮಾಹಿತಿಯನ್ನು ಪ್ರತಿದಿನ ತಂತ್ರಾಂಶಕ್ಕೆ ಇಂಧೀಕರಿಸುವುದು (upload).

### B. ಬಿಬಿಎಂಪಿ ಮತ್ತು ಇತರ ನಗರ ಪ್ರದೇಶಗಳು

- ಮನೆಯ ಬಾಗಿಲಿಗೆ ಹೋಂ ಕ್ಯಾರೆಂಟೈನ್ ಭಿತ್ತಿಪತ್ರ ಅಂಟಿಸುವುದು
- ಇಬ್ಬರು ನೆರೆಹೊರೆಯವರಿಗೆ ಮಾಹಿತಿ ನೀಡುವುದು.
- ಹೋಂ ಕ್ವಾರಂಟೈನ್ ಕಾರ್ಯತಂತ್ರದ ನಿರ್ವಹಣೆಯ ಒಟ್ಟಾರೆ ಜವಾಬ್ದಾರಿಯನ್ನು ವಾರ್ಡ್ ಮಟ್ಟದ ತಂಡ ನಿರ್ವಹಿಸುವುದು
- ಮೇಲ್ವಿಚಾರಣೆ ಮಾಡಲು ನಿವಾಸಿಗಳ ಕಲ್ಯಾಣ ಸಂಘಗಳ / ಅಪಾರ್ಟ್.ಮೆಂಟ್ ಮಾಲೀಕರ ಸಂಘಗಳ ಪಾಲ್ಗೊಳ್ಳುವಿಕೆಯೊಂದಿಗೆ ಬೂತ್ ಮಟ್ಟದಲ್ಲಿ 3 ಸದಸ್ಯರ ತಂಡ ರಚಿಸುವುದು.
- ಫ್ಲೈಯಿಂಗ್ ಸ್ಕ್ವಾಡ್: ಹೋಂ ಕ್ವಾರಂಟೈನ್ ಉಲ್ಲಂಘಿಸುವವರ ವಿರುದ್ಧ ಎಫ್‌ಐಆರ್ ದಾಖಲು ಮಾಡುವುದು ಮತ್ತು ಅಂತಹವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ವರ್ಗಾಯಿಸುವುದು.
- IVRS ಕಾಲ್-ಸೆಂಟರ್ ಮುಖಾಂತರ ಕರೆ ಮಾಡಿ ನಿಗಾವಹಿಸುವುದು.

- ಕ್ವಾರೆಂಟೈನ್ ವಾಚ್ ಅಪ್ಲಿಕೇಶನ್ ಮೂಲಕ ವ್ಯಕ್ತಿಗಳ ತಾಪಮಾನ, ವಯಸ್ಸಾದವರಿಗೆ ಮತ್ತು ಸಹ-ಅಸ್ವಸ್ಥತೆವುಳ್ಳವರಿಗೆ ಬೆರಳು-ತುದಿಯ ನಾಡಿ-ಆಕ್ಸಿಮೆಟ್ರಿ ಮೂಲಕ ಸ್ವಯಂಮೇಲ್ವಿಚಾರಣಾ ಮಾಹಿತಿಯನ್ನು ಪ್ರತಿದಿನ ತಂತ್ರಾಂಶಕ್ಕೆ ಇಂಧೀಕರಿಸುವುದು (upload).

5. **<u>ರೋಗ ಲಕ್ಷಣವಿರುವ ಮತ್ತು ILIs ವ್ಯಕ್ತಿಗಳು ಆಪ್ತಮಿತ್ರ ಸಹಾಯವಾಣಿ (14410)ಗೆ ಕರೆ ಮಾಡುವುದು:</u>** ಯಾರು ಹೋಂ ಕ್ವಾರಂಟೈನ್ ಅನುಸರಣೆಯಲ್ಲಿರುವರೋ ಅಥವಾ ಕೋವಿಡ್-19 ರೋಗ ಲಕ್ಷಣಗಳು ಕಂಡುಬಂದರೆ, 24x7 ಉಚಿತ ಸಹಾಯವಾಣಿ ಆಪ್ತಮಿತ್ರಗೆ ಕರೆಮಾಡಿ ಟೆಲಿಮೆಡಿಸಿನ್ ಸಹಾಯ ಪಡೆದುಕೊಳ್ಳತಕ್ಕದ್ದು ಅಂತಹವರನ್ನು ಜ್ವರ ಕೇಂದ್ರಗಳಿಗೆ ಮುಂದಿನ ಚಿಕಿತ್ಸೆ ಮತ್ತು ಕೋವಿಡ್-19 ಪರೀಕ್ಷೆಗೆ ಕಳುಹಿಸುವುದು.

6. **ಸಾರ್ವಜನಿಕರ, ನಿವಾಸಿ ಕಲ್ಯಾಣ ಸಂಘಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪಾತ್ರ:**

6.1 ಎಲ್ಲಾ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಚೇರಿಗಳು, ಕಾರ್ಖಾನೆಗಳು, ಮಾಲ್‌ಗಳು, ಧಾರ್ಮಿಕ ಸ್ಥಳಗಳು, ಹೋಟೆಲ್‌ಗಳು ಇತ್ಯಾದಿಗಳು ತಮ್ಮ ಎಲ್ಲಾ ಗ್ರಾಹಕರು ಅಥವಾ ಸಂದರ್ಶಕರು ಆವರಣಕ್ಕೆ ಪ್ರವೇಶಿಸುವ ಮೊದಲು ಕ್ವಾರಂಟೈನ್ ಮುದ್ರೆಯನ್ನು (ಅವರ ಕೈಯ ಹಿಂಭಾಗದಲ್ಲಿ) ಪರಿಶೀಲಿಸಬೇಕಾಗುತ್ತದೆ. ಈ ಸಂಸ್ಥೆಯವರು ಕ್ವಾರಂಟೈನ್ ಮುದ್ರೆಯನ್ನು ಹೊಂದಿರುವವರನ್ನು ಅವರ ಕ್ವಾರಂಟೈನ್ ಅವಧಿ ಮುಕ್ತಾಯವಾಗುವವರೆಗೂ ಅಥವಾ ಅವರ ಕೋವಿಡ್ ತಪಾಸಣೆಯಲ್ಲಿ ನೆಗೆಟಿವ್ ವರದಿ ಸ್ವೀಕೃತವಾಗುವವರೆಗೂ ಪ್ರವೇಶಿಸಲು ಅವಕಾಶ ನೀಡಬಾರದು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಪೊಲೀಸರಿಗೆ ದೂರವಾಣಿ ಸಂಖ್ಯೆ 100 ರಲ್ಲಿ ಉಲ್ಲಂಘನೆಗಳ ಬಗ್ಗೆ ಮಾಹಿತಿ ನೀಡುವುದು.

6.2 ಸಾರ್ವಜನಿಕರು ಮತ್ತು ನಿವಾಸಿ ಕಲ್ಯಾಣ ಸಂಘಗಳು ತಮ್ಮ ನೆರೆಹೊರೆಯಲ್ಲಿರುವ ಯಾವುದೇ ವ್ಯಕ್ತಿಗಳು ಕ್ವಾರಂಟೈನನ್ನು ಉಲ್ಲಂಘಿಸಿದಲ್ಲಿ ಪೊಲೀಸರಿಗೆ ದೂರವಾಣಿ ಸಂಖ್ಯೆ 100 ರಲ್ಲಿ ಮಾಹಿತಿ ನೀಡುವುದು.

ವಿಜಯಭಾಸ್ಕರ

**(ಟಿ.ಎಂ. ವಿಜಯ್ ಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು